**ಅಸಲು ದಾವಾ. ನಂಃ 316/2023**

**ಡಿಡಬ್ಲು – 1**

**ಸಾಕ್ಷಿಯನ್ನು ದಿನಾಂಕಃ 20.11.2024 ರಂದು ಸಾಕ್ಷಿ ಕರೆಯಿಸಿ, ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಕೆ ಬಿ ವಕೀಲರಿಂದಃ**

1. ಮೂಲ ಪುರುಷ ಮಹಾದೇವಪ್ಪನಿಗೆ ಮೂರು ಜನ ಮಕ್ಕಳು. ಅವರುಗಳೆಂದರೆ, ಮುದಿಯಪ್ಪ, ಸಿದ್ದಪ್ಪ, ನಿಂಗಪ್ಪ ಮತ್ತು ಒಬ್ಬ ಹೆಣ್ಣು ಮಗಳು ದ್ಯಾಮವ್ವ. ದ್ಯಾಮವ್ವ ಜೀವಂತ ಇದ್ದಾರೆ. ದಾವಾ ಸ್ವತ್ತು ಹಿರೇಹಾಳ ಗ್ರಾಮದಲ್ಲಿವೆ. 1 ನೇ ಪ್ರತಿವಾದಿ ನಿಂಗಪ್ಪ ಸುಮಾರು 30 ವರ್ಷಗಳಿಂದ ಬೇರೆಯಾಗಿ ವಾಸವಾಗಿದ್ದಾರೆ. 30 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡು ಅವರವರ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

2. ಸುಮಾರು 30 ವರ್ಷಗಳ ಹಿಂದೆ ಭಾಗವಾಗಿರುವ ವಿಚಾರ ನನಗೆ ತಿಳಿಯಿತು. ಡ.ನಂಬರ 7385 ರಂತೆ ಆಗಿರುತ್ತದೆ. ಈ ಸಂಬಂದ ಸಾಕ್ಷಿಯು ವಾಟ್ನಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ – 9 ಎಂದು ಗುರುತಿಸಲಾಗಿದೆ. ನಿಪಿ – 9 ರಲ್ಲಿ ಸರ್ವೆ ನಂಬರ 63/ಎ/6, ವಿಸ್ತೀರ್ಣ 16 ಗುಂಟೆ ಸಿದ್ದಪ್ಪ ಮತ್ತು ನಿಂಗಪ್ಪ ಅವರಿಗೆ ಬಂದಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಇಂದಿಗೂ ಸಹ ನಮ್ಮ ಜೊತೆಗೆ ಇದ್ದು ಜೋಪಾಣ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

3. 1 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ 2022 ರಲ್ಲಿ ಒಂದು ಸುಳ್ಳು ಕ್ರಯ ಪತ್ರ ಮಾಡಿಕೊಟ್ಟಿದ್ದು ಅದು ವಾದಿಗೆ ಬಂಧನಕಾರಿಯಲ್ಲ ಎಂದರೆ ಸರಿಯಲ್ಲ. ನಾವು 1 ನೇ ಪ್ರತಿವಾದಿಯ ಜೊತೆಗೆ ಶಾಮಿಲಾಗಿ 5 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸರ್ವೆ ನಂಬರ 63/ಎ/3 ರಲ್ಲಿ 8 ಗುಂಟೆ ಜಮೀನು ಇದ್ದರು ಸಹ ವಾದಿಗಳಿಗೆ ಮೋಸ ಮಾಡುವ ಸಲುವಾಗಿ 1 ನೇ ಪ್ರತಿವಾದಿಯ ಮೂಲಕ ನಮ್ಮ ಹೆಸರಿಗೆ ಕ್ರಯಕ್ಕೆ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

4. ವಾದಿಗಳಿಗೆ ಮೋಸ ಮಾಡುವ ಸಲುವಾಗಿ 1 ನೇ ಪ್ರತಿವಾದಿಯಿಂದ ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಂಗಪ್ಪನಿಗೆ ದಾವಾ ಶೆಡ್ಯೂಲ್ ಸ್ವತ್ತು 3, 1 ಎಕರೆ ಸ್ವತ್ತನ್ನು ಮಾರಾಟ ಮಾಡುವ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಯಾವುದೇ ಆಸ್ತಿ ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ಮೇಲ್ಕಂಡ ಕ್ರಯ ಪತ್ರಗಳು ವಾದಿಯ ಭಾಗಾಂಶಕ್ಕೆ ಬಂಧನಕಾರಿಯಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)***

ಓ. ಹೇ. ಕೇ. ಸರಿ ಅದೆ.

-ಸಹಿ-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.